ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 25-03-1971.

*<u>ಅತೀತ ಮತ್ತು ವಿಶ್ವಕ್ಕೆ ಅತಿ ಪ್ರಿಯರಾಗುವ ವಿಧಿ</u>* (न्यारे और विश्व के प्यारे बनने की विधि)

ಸರ್ವರೂ ತಮ್ಮ ಅಲೌಕಿಕ ಮತ್ತು ಪಾರಲೌಕಿಕ ನಶೆ ಮತ್ತು ಗುರಿಯನ್ನು ಸದಾ ಹೊಂದಿದ್ದೀರಾ? ಅಲೌಕಿಕ ನಶೆ ಮತ್ತು ಗುರಿ ಮತ್ತು ಪಾರಲೌಕಿಕ ನಶೆ ಮತ್ತು ಗುರಿ, ಎರಡನ್ನೂ ತಿಳಿದುಕೊಂಡಿರುವಿರಾ? ಎರಡರಲ್ಲಿ ಅಂತರ ಇದೆಯೇ ಅಥವಾ ಒಂದೇ ಆಗಿದೆಯೇ? ಅಲೌಕಿಕ ನಶೆ ಮತ್ತು ಗುರಿ ಈಶ್ವರೀಯ ಜನ್ಮದ್ದಾಗಿದೆ ಮತ್ತು ಪಾರಲೌಕಿಕ ನಶೆ ಮತ್ತು ಗುರಿ ಭವಿಷ್ಯ ಜನ್ಮದ್ದಾಗಿದೆ. ಹಾಗಾದರೆ ಈಶ್ವರೀಯ ಜನ್ಮದ ನಶೆ ಮತ್ತು ಗುರಿ ನೆನಪಿರುತ್ತದೆಯೇ? ಜೊತೆ ಜೊತೆಗೆ ಪಾರಲೌಕಿಕ ಅರ್ಥಾತ್ ಭವಿಷ್ಯದ ನಶೆ ಮತ್ತು ಗುರಿ ನೆನಪಿರುತ್ತದೆಯೆ? ಪ್ರತಿ ಸಮಯ ಈ ಎರಡು ಸ್ಮೃತಿ ಇದ್ದರೆ ಹೇಗೆ ತಯಾರಾಗುತ್ತೀರಿ? ಅಲೌಕಿಕ ನಶೆ ಮತ್ತು ಗುರಿಯಿಂದ ಅತೀತರಾಗುತ್ತೀರಿ ಮತ್ತು ಪಾರಲೌಕಿಕ ನಶೆ ಮತ್ತು ಗುರಿಯಿಂದ ವಿಶ್ವಕ್ಕೆ ಪ್ರಿಯರಾಗುತ್ತೀರಿ. ಹೀಗೆ ಎರಡೂ ನಶೆ ಮತ್ತು ಗುರಿಯಿಂದ ಅತೀತ ಮತ್ತು ಪ್ರಿಯರಾಗುತ್ತೀರಿ. ತಿಳಿಯಿತೆ.

ಈಗ ಎಲ್ಲರಿಂದ ಅತೀತರಾಗಬೇಕು. ನಿಮ್ಮ ದೇಹದಿಂದ ಸಹ ಅತೀತ ಆಗಬೇಕು ಎಂದ ಮೇಲೆ ಎಲ್ಲಾ ಮಾತಿನಿಂದ ಅತೀತ ಆಗುವಿರಿ. ಈಗ ಅತೀತರಾಗುವ ಪುರುಷಾರ್ಥ ಮಾಡುತ್ತಿರುವಿರಿ. ಅತೀತರಾಗುವುದರಿಂದ ಸ್ವತಃ ಎಲ್ಲರಿಗೂ ಪ್ರಿಯರಾಗುವಿರಿ. ಪ್ರಿಯರಾಗುವ ಪುರುಷಾರ್ಥ ಇರುವುದಿಲ್ಲ. ಅತೀತರಾಗುವ ಪುರುಷಾರ್ಥ ಇರುತ್ತದೆ. ಸರ್ವರಿಗೂ ಪ್ರಿಯರಾಗಲು ಯಾವ ಪುರುಷಾರ್ಥ ಮಾಡಬೇಕು? ಸರ್ವರಿಂದ ಅತೀತರಾಗುವುದು. ನಿಮ್ಮ ದೇಹದಿಂದ ಅತೀತ(ನ್ಯಾರಾ) ಆಗಿಯೇ ಆಗುತ್ತೀರಿ ಆದರೆ ಆತ್ಮನಲ್ಲಿ ಯಾವ ಹಳೆಯ ಸಂಸ್ಕಾರಗಳಿವೆ. ಅದರಿಂದ ಸಹ ಅತೀತ ಆಗಿರಿ. ಪ್ರಿಯರಾಗುವ ಪುರುಷಾರ್ಥದಿಂದ ಪ್ರಿಯರಾದರೆ ಪರಿಣಾಮ ಏನಾಗುವುದು? ಪ್ರಿಯರಾಗುವ ಬದಲು ಬಾಪ್ ದಾದಾ ಅವರ ಹೃದಯ ರೂಪಿ ಸಿಂಹಾಸನದಿಂದ ಇನ್ನೂ ದೂರ ಆಗುವಿರಿ. ಆದ್ದರಿಂದ ಈ ಪುರುಷಾರ್ಥ ಮಾಡಬೇಡಿ. ಯಾವುದೇ ಅತೀತ ವಸ್ತು ಅವಶ್ಯ ಪ್ರಿಯವಾಗಿರುತ್ತದೆ. ಈ ಸಂಘಟನೆಯಲ್ಲಿ ಯಾವುದಾದರೂ ಅತೀತ ವಸ್ತು ಕಾಣಿಸಿದರೆ ಎಲ್ಲರ ಸೆಳೆತ ಮತ್ತು ಪ್ರೀತಿ ಅದರ ಕಡೆ ಹೋಗುವುದು. ಆದ್ದರಿಂದ ನೀವೂ ಅತೀತರಾಗಿರಿ. ಸಹಜ ಪುರುಷಾರ್ಥ ಇದೆಯಲ್ಲವೆ. ಅತೀತರಾಗಲು ಆಗುವುದಿಲ್ಲ ಅದಕ್ಕೆ ಕಾರಣವೇನು? ಈಗೀಗ ಪ್ರಪಂಚದಲ್ಲಿ ಯಾವ ಕಾರಣದಿಂದ ಸೆಳೆತ ಆಗುತ್ತದೆ? (ಆಕರ್ಷಣೆಯಿಂದ) ಆಕರ್ಷಣೆಯೂ ಸ್ವಾರ್ಥದಿಂದ ಇರುತ್ತದೆ. ಈ ಸಮಯದಲ್ಲಿ ಸೆಳೆತ ಸ್ನೇಹದಿಂದ ಅಲ್ಲ ಸ್ವಾರ್ಥದಿಂದ ಆಗುತ್ತದೆ. ಸ್ವಾರ್ಥದ ಕಾರಣ ಸೆಳೆತ ಮತ್ತು ಸೆಳೆತದ ಕಾರಣ ಅತೀತರಾಗಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಏನು ಮಾಡಬೇಕು? ಸ್ವಾರ್ಥದ ಅರ್ಥ ಏನು? ಸ್ವಾರ್ಥ ಅರ್ಥಾತ್ ಸ್ವಯಂನ ರಥವನ್ನು ಸ್ವಾಹಾ ಮಾಡಿ. ಈ ರಥ ಏನಿದೆ ಅರ್ಥಾತ್ ದೇಹಾಭಿಮಾನ, ದೇಹದ ಸ್ಮೃತಿ, ದೇಹದ ಸೆಳೆತ ಇದೆ. ಈ ಸ್ವಾರ್ಥವನ್ನು ಹೇಗೆ ಸಮಾಪ್ತಿ ಮಾಡುವಿರಿ? ಅದರ ಸಹಜ ಪುರುಷಾರ್ಥ, ಸ್ವಾರ್ಥ ಶಬ್ದದ ಅರ್ಥವನ್ನು ತಿಳಿದುಕೊಳ್ಳಿ, ಸ್ವಾರ್ಥ ಹೋದರೆ ಅತೀತರಾಗಿಯೇ ಬಿಡುವಿರಿ. ಒಂದು ಅರ್ಥವನ್ನು ಮಾತ್ರ ಅರಿತುಕೊಳ್ಳಬೇಕು. ಅರಿತುಕೊಂಡು ಅರ್ಥ ಸ್ವರೂಪ ಆಗಬೇಕು. ಒಂದೇ ಶಬ್ದದ ಅರ್ಥ ತಿಳಿದುಕೊಳ್ಳುವುದರಿಂದ ಸದಾ ಒಬ್ಬನವರು ಮತ್ತು ಎಕರಸ ಆಗುವಿರಿ. ಒಳ್ಳೆಯದು.

ಇಂದು ಟೀಚರ್ಸ್ ಭಟ್ಟಿಯ ಉದ್ಘಾಟನೆಯ ದಿನವಾಗಿದೆ. ಸಂಪೂರ್ಣ ಆಹುತಿ ಹಾಕುವ ಸಾಮರ್ಥ್ಯ ಇದೆಯೇ? ಈ ಗುಂಪು ಇನ್ಚಾರ್ಜ್ ಟೀಚರ್ಸ್‌ಗಳದಾಗಿದೆ ಅಲ್ಲವೆ. ಈಗ ಇರುವಿರೊ ಅಥವಾ ಆಗುವವರಾಗಿದ್ದೀರೊ? ಮುಖ್ಯ ಧಾರಣೆ ಇದೇ ಆಗಿದೆ ಏನೆಂದರೆ ಸದಾ ನಿಮ್ಮ ಸಂಪೂರ್ಣ ಸ್ಥಿತಿಯ ಮತ್ತು ನಿಮ್ಮ ಸಂಪೂರ್ಣ ಸ್ವರೂಪದ ಆವಾಹನೆ ಮಾಡುತ್ತಿರಿ. ಯಾರನ್ನಾದರೂ ಆವಾಹನೆ ಮಾಡಿದಾಗ ಬುದ್ಧಿಯಲ್ಲಿ ಅವರದೇ ಸ್ಮೃತಿ ಇರುತ್ತದೆಯಲ್ಲವೆ. ಅದೇ ರೀತಿ ನಿಮ್ಮ ಸಂಪೂರ್ಣ ಸ್ಥಿತಿಯ ಆವಾಹನೆ ಮಾಡುತ್ತಾ ಇದ್ದರೆ ಬುದ್ಧಿಯಲ್ಲಿ ಅದರದೇ ಸ್ಮೃತಿ ಇರುತ್ತದೆ. ಮತ್ತು ಅದೇ ಸ್ಮೃತಿಯಲ್ಲಿರುವುದರಿಂದ ಪರಿಣಾಮ ಏನಾಗುವುದು? ಈ ಆವಾಗಮನ

ಚಕ್ರ ಏನು ನಡೆಯುತ್ತಿರುತ್ತದೆ. ಆವಾಗಮನದ ಚಕ್ರ ಯಾವುದು? ಕೆಲವು ಬಾರಿ ಉನ್ನತ ಸ್ಥಿತಿಯಲ್ಲಿ ಇರುತ್ತೀರಿ, ಕೆಲವು ಬಾರಿ ಕೆಳಗೆ ಬರುತ್ತೀರಿ. ಮೇಲೆ ಕೆಳಗೆ ಬರುವ ಹೋಗುವ ಈ ಆವಾಗಮನದ ಚಕ್ರದಿಂದ ಮುಕ್ತರಾಗುವಿರಿ. ಆ ಜನರು ಜನನ ಮರಣದ ಚಕ್ರದಿಂದ ಮುಕ್ತರಾಗಲು ಬಯಸುತ್ತಾರೆ ಮತ್ತು ನೀವು ಈ ಸ್ಮೃತಿ ಮತ್ತು ವಿಸ್ಮೃತಿಯ ಚಕ್ರದಿಂದ ಮುಕ್ತರಾಗುವ ಪುರುಷಾರ್ಥ ಮಾಡುತ್ತೀರಿ. ಆದ್ದರಿಂದ ಸದಾ ನಿಮ್ಮ ಸಂಪೂರ್ಣ ಸ್ವರೂಪದ ಆವಾಹನೆ ಮಾಡುವುದರಿಂದ ಆವಾಗಮನದಿಂದ ಬಿಡುಗಡೆ ಆಗುವಿರಿ ಮತ್ತು ಈ ವ್ಯರ್ಥ ಮಾತುಗಳಿಂದ ದೂರ ಆಗುವುದರಿಂದ ಸದಾ ಹೊಳೆಯುತ್ತಿರುವ ಅದೃಷ್ಟದ ನಕ್ಷತ್ರರಾಗುವಿರಿ. ಇನ್ಚಾರ್ಜ್ ಟೀಚರ್ ಆಗಲು ಮೊದಲು ನಿಮ್ಮ ಆತ್ಮದ ಬ್ಯಾಟರಿಯನ್ನು ಚಾರ್ಜ್ ಮಾಡಿರಿ. ಯಾರ ಬ್ಯಾಟರಿ ಎಷ್ಟು ಚಾರ್ಜ್ ಆಗಿರುತ್ತದೆಯೋ ಅಷ್ಟು ಒಳ್ಳೆಯ ಇನ್ಚಾರ್ಜ್ ಟೀಚರ್ ಆಗುವಿರಿ. ತಿಳಿಯಿತೆ. ನಾನು ಇನ್ಚಾರ್ಜ್ ಎನ್ನುವುದು ನೆನಪಾದಾಗ ಮೊದಲು ನನ್ನ ಬ್ಯಾಟರಿ ಚಾರ್ಜ್ ಆಗಿದೆಯೇ ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ. ಬ್ಯಾಟರಿ ಕಡಿಮೆ ಚಾರ್ಜ್ ಆಗಿದ್ದರೆ ಇನ್ಚಾರ್ಜ್ ಟೀಚರನಲ್ಲಿಯೂ ಅಷ್ಟು ಲೋಪಗಳು ಕಂಡುಬರುವುದು. ಹಾಗಾದರೆ ಈಗ ಏನು ಮಾಡಬೇಕು? ಒಳ್ಳೆಯ ರೀತಿಯಲ್ಲಿ ಬ್ಯಾಟಾರಿ ಚಾರ್ಜ್ ಮಾಡಿಕೊಂಡು ನಂತರ ಇನ್ಚಾರ್ಜ್ ಟೀಚರ್ ಆಗಿ ಹೋಗಿರಿ. ಸುಮ್ಮನೆ ಇನ್ಚಾರ್ಜ್ ಆಗಿ ಹೋಗಬೇಡಿ, ಬ್ಯಾಟರಿ ಚಾರ್ಜ್ ಮಾಡಿಕೊಳ್ಳದೇ ಇನ್ಚಾರ್ಜ್ ಆದರೆ ಏನಾಗುವುದು? ಚಾರ್ಜ್ ಶಬ್ದಕ್ಕೆ ಎರಡು ಮೂರು ಅರ್ಥಗಳಿವೆ. ಒಂದಾಗಿದೆ ಬ್ಯಾಟಾರಿ ಚಾರ್ಜ್, ಇನ್ನೊಂದು ಚಾರ್ಜ್ ಅಂದರೆ ಕರ್ತವ್ಯ. ಮೂರನೆ ಚಾರ್ಜ್ ಅರ್ಥಾತ್ ಆಪಾದನೆ, ದೋಷಿಯಾಗುವುದು. ಇನ್ಚಾರ್ಜ್ ಆದ ನಂತರ ಬ್ಯಾಟರಿ ಚಾರ್ಜ್ ಆಗಿದ್ದರೆ ಯಥಾರ್ಥ ರೂಪದಲ್ಲಿ ಇನ್ಚಾರ್ಜ್ ಆಗುತ್ತೀರಿ. ಬ್ಯಾಟರಿ ಚಾರ್ಜ್ ಇಲ್ಲದಿದ್ದರೆ, ಯಥಾರ್ಥ ರೂಪ ಇಲ್ಲ ಅಂದರೆ ಭಿನ್ನ ಭಿನ್ನ ಆರೋಪಗಳು ಬರುತ್ತವೆ. ಹಾಗಾದರೆ ಇನ್ಚಾರ್ಜ್ ಆಗುವುದು ಹೇಗೆ ಎಂದು ಈಗ ತಿಳಿಯಿತೆ. ಧರ್ಮರಾಜಪುರಿಯಲ್ಲಿ ಮೊದಲು ಆಪಾದನೆ ಮಾಡಿ ನಂತರ ಶಿಕ್ಷೆ ಕೊಡುತ್ತಾರೆ. ಬ್ಯಾಟರಿ ಚಾರ್ಜ್ ಮಾಡದಿದ್ದರೆ ಆರೋಪಿ ಆಗಬೇಕಾಗುತ್ತದೆ.

ಎಲ್ಲರ ದೃಷ್ಟಿ ಈ ಗುಂಪಿನ ಕಡೆ ಇರಬೇಕು ಆ ರೀತಿ ನೀವು ಆಗಿ ಹೋಗಬೇಕು. ದೊಡ್ಡವರಂತೂ ದೊಡ್ಡವರೇ ಅದರೆ ಚಿಕ್ಕವರು ಪರಮಾತ್ಮನಂತೆ ಸುಂದರರು ಎಂದು ಎಲ್ಲರಿಗೂ ಅನುಭವ ಆಗಬೇಕು. ಇಂತಹ ಲಕ್ಷ್ಯ ಇಟ್ಟುಕೊಂಡು, ಭಟ್ಟಿಯಲ್ಲಿ ಇದೇ ತರಹದ ಲಕ್ಷಣಗಳನ್ನು ಧಾರಣೆ ಮಾಡಲು ಹೋಗಬೇಕು. ಎಲ್ಲಿ ತಮ್ಮನ್ನು ತಾವು ಬಾಗಿಸಬೇಕಾಗುವುದು ಅಲ್ಲಿ ಬಾಗುವಂತೆ ಕೋಮಲರಾಗಬೇಕು. ಕೋಮಲ ವಸ್ತುವನ್ನು ಎಲ್ಲಿ ಬಾಗಿಸಬೇಕು ಅಲ್ಲಿ ಬಾಗಿಸಲು ಸಾಧ್ಯವಾಗುತ್ತದೆ. ಆದರೆ ಗಟ್ಟಿ ಆಗಿರುವುದನ್ನು ಯಾರೂ ಬಾಗಿಸಲು ಸಾಧ್ಯವಾಗುವುದಿಲ್ಲ. ಕೋಮಲರಾಗಬೇಕು ಆದರೆ ಯಾವುದರಲ್ಲಿ? ಸಂಸ್ಕಾರಗಳನ್ನು ಬಾಗಿಸುವುದರಲ್ಲಿ ಕೋಮಲ ಆಗಬೇಕು. ಆದರೆ ಕೋಮಲ ಹೃದಯದಿಂದ ಸುರಕ್ಷಿತವಾಗಿರಿ. ಈ ಲಕ್ಷ್ಯ ಮತ್ತು ಲಕ್ಷಣವನ್ನು ಧಾರಣೆ ಮಾಡಿ ಹೋಗಬೇಕು. ಈ ಸ್ನೇಹಿ ಹಾಗೂ ಸಹಯೋಗಿ ಆಗುವ ಗುಂಪಿಗಾಗಿ ಸ್ಲೋಗನ್ ಆಗಿದೆ "**ಅಧಿಕಾರಿ ಆಗುತ್ತೇವೆ ಮತ್ತು ಅಧೀನತೆಯನ್ನು ಅಳಿಸಿಹಾಕುತ್ತೇವೆ**". ಎಂದೂ ಅಧೀನರಾಗಬಾರದು. ಸಂಕಲ್ಪಗಳಿಗಾಲಿ, ಮಾಯೆಗಾಗಲಿ ಮತ್ತು ಇನ್ನಾವುದೇ ರೂಪಕ್ಕೆ ಅಧೀನವಾಗಬಾರದು. ಈ ಶರೀರಕ್ಕೂ ಅಧಿಕಾರಿ ಆಗಿ ನಡೆಯಬೇಕು ಮತ್ತು ಮಾಯೆಗೂ ಅಧಿಕಾರಿ ಆಗಿ ಅದನ್ನು ನಿಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು. ಸಂಬಂಧದ ಅಧೀನತೆಯಲ್ಲಿಯೂ ಬರಬೇಡಿ. ಲೌಕಿಕವಾಗಲೀ ಅಥವಾ ಈಶ್ವರೀಯ ಸಂಬಂಧದ ಅಧೀನತೆಯಲ್ಲಿಯೂ ಬರಬಾರದು. ಸದಾ ಅಧಿಕಾರಿ ಆಗಿರಿ. ಈ ಸ್ಲೋಗನ್ ಸದಾ ನೆನಪಿಡಿ. ಈ ರೀತಿ ಆಗಿಯೇ ಹೋಗಬೇಕು. ಮಾನಸ ಸರೋವರದಲ್ಲಿ ಸ್ನಾನ ಮಾಡುವುದರಿಂದ ದೇವತೆ ಆಗುತ್ತಾರೆ ಎಂದು ಹೇಳುತ್ತಾರಲ್ಲವೆ. ಈ ಗುಂಪು ಸಹ ಈ ಭಟ್ಟಿ ರೂಪಿ ಮಾನಸ ಸರೋವರದಲ್ಲಿ ಸ್ನಾನ ಮಾಡಿ ಫರಿಶ್ತೆ ಆಗಬೇಕು.

**ಫರಿಶ್ತೆ ಅರ್ಥಾತ್ ಪ್ರಕಾಶಮಯ ಕಾಯ, ಈ ದೇಹದ ಸ್ಮೃತಿಯಿಂದಲೂ ದೂರ, ಅವರ ಕಾಲು ಅರ್ಥಾತ್ ಬುದ್ಧಿ ಈ ಪಂಚ ತತ್ವದ ಆಕರ್ಷಣೆಯಿಂದ ಮೇಲೆ ಅರ್ಥಾತ್ ದೂರ ಇರುತ್ತದೆ**. ಇಂತಹ ಫರಿಶ್ತೆಯರನ್ನು ಮಾಯೆ ಅಥವಾ ಯಾವುದೇ ಮಾಯಾವಿ ಮುಟ್ಟಲು ಸಾಧ್ಯವಿಲ್ಲ, ಕುಮಾರಿಯರ ಮಹಿಮೆ ಬಹಳ ಇದೆ, ಆದರೆ ಯಾವ ಕುಮಾರಿ? ಬ್ರಹ್ಮಕುಮಾರಿಯರ ಮಹಿಮೆಯ ಗಾಯನವಿದೆ. *ಬ್ರಹ್ಮಕುಮಾರಿ ಅರ್ಥಾತ್ ಬ್ರಹ್ಮಾ ತಂದೆಯನ್ನು ಪ್ರತ್ಯಕ್ಷ ಮಾಡುವ ಕುಮಾರಿ.* ಟೀಚರ್ಸ್ ಆಗುವವರು ಕೇವಲ

ಬುದ್ಧಿಯಲ್ಲಿ ಜ್ಞಾನ ಬಿಂದುಗಳನ್ನು ಮಾತ್ರ ಇಟ್ಟುಕೊಳ್ಳುವುದಲ್ಲ ಅಥವಾ ವರ್ಣನೆ ಮಾಡುವುದಲ್ಲ ಆದರೆ ಬಿಂದು ರೂಪ ಆಗಿ ಬಿಂದುವನ್ನು ವರ್ಣನೆ ಮಾಡಬೇಕು. ನೀವು ಸ್ವಯಂ ಆ ಜ್ಞಾನಬಿಂದುವಿನ ಸ್ವರೂಪದಲ್ಲಿ ಸ್ಥಿತ ಆಗದಿದ್ದರೆ ಬಿಂದುಗಳ ಪ್ರಭಾವ ಆಗುವುದಿಲ್ಲ. ಆದ್ದರಿಂದ ಬಿಂದುಗಳನ್ನು ಒಟ್ಟುಮಾಡುವುದರ ಜೊತೆ ನಿಮ್ಮ ಬಿಂದು ರೂಪವನ್ನೂ ನೆನಪು ಮಾಡುವಿರಿ. ನಿಮ್ಮ ಕಾಪಿಗಳು(ನೋಟ್ ಪುಸ್ತಕ) ತುಂಬುತ್ತೀರಿ ಆಗ ಕಾಪಿಗಳನ್ನು ನೋಡಿ ನಾನು ಬ್ರಹ್ಮಾ ತಂದೆಯ ಚರಿತ್ರೆಯ ಕಾಪಿ(ನಕಲು) ಆಗಿದ್ದೇನೆಯೇ? ಎಂದು ಪರಿಶೀಲನೆ ಮಾಡಿಕೊಳ್ಳಿ. ಕಾಪಿ ಮಾಡಿದಾಗ ಅದು ತನ್ನರೂಪವಾಗಿರುತ್ತದೆ ಅಲ್ಲವೆ? ಈ ರೀತಿ ತಂದೆ ಸಮಾನ ಕಂಡುಬರಬೇಕು. ಎಷ್ಟು ಸಮಾನತೆ ಇರುತ್ತದೆಯೋ ಅಷ್ಟು ಎದುರಿಸುವ ಶಕ್ತಿ ಇರುತ್ತದೆ. ಸಮಾನತೆ ತರುವುದರಿಂದ ಎದುರಿಸುವ ಶಕ್ತಿ ಸ್ವತಃ ಬರುತ್ತದೆ. ಒಳ್ಳೆಯದು.

ಈ ಗುಂಪು ಕಡಿಮೆ ಅಲ್ಲ. ಇಷ್ಟು ದೊಡ್ಡ ಶಕ್ತಿದಳ ಸೇವೆಗಾಗಿ ಮೂಲೆ ಮೂಲೆಯಲ್ಲಿ ಹರಡಿಬಿಟ್ಟರೆ ಆಗ ಏನಾಗುವುದು? ಧ್ವನಿ ಮೊಳಗುವುದು ಬ್ರಹ್ಮಾಕುಮಾರಿಯರಿಗೆ ಜಯವಾಗಲಿ, ಈಗ ಬೈಯ್ಯುತ್ತಾರಲ್ಲವೆ? ಇಲ್ಲಿಯೇ ನಿಮ್ಮ ಮೇಲೆ ಮಹಿಮೆಯ ಪುಷ್ಪಗಳನ್ನು ಹಾಕುವರು ಆದ್ದರಿಂದ ಈ ರೀತಿ ಆಗಿ ಹೋಗಬೇಕೆಂದು ಹೇಳಿದೆವು ನೋಡಿದ ತಕ್ಷಣ ಮುಖದಿಂದ ಧ್ವನಿ ಮೊಳಗಬೇಕು. ಈ ಗುಂಪು ಈ ಪ್ರಾಕ್ಟಿಕಲ್ ಪರೀಕ್ಷೆ ಕೊಡಬೇಕು. ನಾಲ್ಕೂ ಕಡೆ ಬಾಪ್ ದಾದಾ ಮತ್ತು ಸಹಾಯಕ ಮಕ್ಕಳ ಜಯ ಜಯಕಾರ ಆಗುತ್ತದೆ. ಇಂತಹ ಶಕ್ತಿ ಇದೆಯೇ? ಒಬ್ಬನ ಸಂಗದಲ್ಲಿರುವುದರಿಂದ ಸಂಗ ದೋಷದಿಂದ ದೂರ ಆಗುವಿರಿ. ಬುದ್ಧಿಯ ಸಂಗ ಯಾರ ಜೊತೆ ಇದೆ ಎಂದು ಸದಾ ಪರಿಶೀಲನೆ ಮಾಡಿಕೊಳ್ಳಿ. ಒಬ್ಬನ ಜೊತೆ ಇದೆಯೇ? ಒಬ್ಬನ ಜೊತೆ ಇದ್ದರೆ ಅನೇಕ ಸಂಗ ದೋಷದಿಂದ ಪಾರಾಗುವಿರಿ. ಸಂಗ ದೋಷ ಅನೇಕ ಪ್ರಕಾರದ ದೋಷವನ್ನು ಹುಟ್ಟಿಸುತ್ತದೆ. ಅದಕ್ಕಾಗಿ ಇದರ ಕಡೆ ಬಹಳ ಗಮನ ಇಡಬೇಕು. ಒಬ್ಬ ತಂದೆ ಮತ್ತು ನಾನು, ಮೂರನೇಯವರು ಯಾರೂ ಇಲ್ಲ. ಇಂತಹ ಸ್ಥಿತಿ ಆದಾಗ ನಿಮ್ಮ ಮಸ್ತಕದಿಂದ ಸದಾ ಮೂರನೆ ನೇತ್ರದ ಸಾಕ್ಷಾತ್ಕಾರ ಆಗುತ್ತದೆ. ಇಲ್ಲಿ ಯಾವ ಸ್ಮೃತಿ ಚಿಹ್ನೆ ಇದೆ ಅದರಲ್ಲಿ ಯೋಗದ ಚಿಹ್ನೆ ಏನು ತೋರಿಸಿದ್ದಾರೆ? ಮೂರನೆ ನೇತ್ರ ಬುದ್ಧಿಯಲ್ಲಿ ಮೂರನೇಯವರು ಯಾರಾದರೂ ಬಂದರೆ ಆಗ ಮೂರನೆ ನೇತ್ರ ಮುಚ್ಚಿಬಿಡುತ್ತದೆ. ಆದ್ದರಿಂದ ಮೂರನೆ ನೇತ್ರ ಸದಾ ತೆರೆದಿರಬೇಕು. ಅದಕ್ಕಾಗಿ ಮೂರನೇಯವರು ಯಾರೂ ಇಲ್ಲ ಎಂದು ನೆನಪಿಡಿ, ಒಳ್ಳೆಯದು.

ಅವ್ಯಕ್ತ ಮುರಳಿ 25-03-1971.

***ಅತೀತ ಮತ್ತು ವಿಶ್ವಕ್ಕೆ ಪ್ರಿಯವಾಗುವ ವಿಧಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಅಲೌಕಿಕ ಮತ್ತು ಪಾರಲೌಕಿಕ ನಶೆಯಲ್ಲಿ ಇದ್ದೇನೆ.

2. ನಾನು ನನ್ನ ದೇಹದ ಸಂಸ್ಕಾರ ಹಾಗೂ ಸರ್ವ ಆತ್ಮರಲ್ಲಿ ಇರುವ ಹಳೆಯ ಸಂಸ್ಕಾರಗಳಿಂದ ಅತೀತವಾಗಿ ತಂದೆಯ ಹೃದಯ ಸಿಂಹಾಸನಕ್ಕೆ ಸಮೀಪ ಇದ್ದೇನೆ.

3. ನಾನು ದೇಹಾಭಿಮಾನ, ದೇಹಸ್ಮೃತಿ, ದೇಹದ ಸೆಳೆತ ಈ ಸ್ವಾರ್ಥವನ್ನು ಸಮಾಪ್ತಿ ಮಾಡಿ ಒಬ್ಬರವನಾಗಿ ಏಕರಸವಾಗಿ ತಯಾರಾಗಿದ್ದೇನೆ.

4. ನಾನು ಸಂಪೂರ್ಣ ಸ್ವರೂಪವನ್ನು ಸ್ಮೃತಿಯಲ್ಲಿಟ್ಟು ಒಮ್ಮೊಮ್ಮೆ ಉನ್ನತ ಸ್ಥಿತಿ ಮತ್ತು ಒಮ್ಮೊಮ್ಮೆ ಕೆಳಗೆ ಬರುವುದು - ಈ ಬಂದು ಹೋಗುವ ಚಕ್ರದಿಂದ ಮುಕ್ತವಾಗಿದ್ದೇನೆ.

5. ನಾನು ಸದಾ ಹೊಳೆಯುತ್ತಿರುವ ಅದೃಷ್ಟ ನಕ್ಷತ್ರ.

6. ನಾನು ನನ್ನ ಆತ್ಮರೂಪಿ ಬ್ಯಾಟರಿಯನ್ನು ಚಾರ್ಜ್ ಮಾಡಿಕೊಂಡಿರುವ ಶ್ರೇಷ್ಠ ಇಂಚಾರ್ಜ್ ಸ್ವರೂಪ.

7. ನಾನು ನನ್ನ ಸಂಕಲ್ಪಗಳಿಗೆ, ಮಾಯೆಗೆ, ಶರೀರಕ್ಕೆ, ಲೌಕಿಕ ಮತ್ತು ಈಶ್ವರೀಯ ಸಂಬಂಧಗಳಿಗೆ ಸದಾ ಅಧಿಕಾರಿ.

8. ನನ್ನ ಬುದ್ಧಿ ರೂಪಿ ಪಾದ ಪಂಚ ತತ್ವಗಳಿಂದ ಮೇಲೆ ಇರುವ ಅವ್ಯಕ್ತ ಫರಿಶ್ತಾ.

9. ನಾನು ಜ್ಞಾನದ ಬಿಂದುವಿನ ಸ್ವರೂಪವಾಗಿ ಬಿಂದುಗಳನ್ನು ಎಲ್ಲರಿಗೂ ಕೊಟ್ಟಿದ್ದೇನೆ.

10. ನನ್ನ ಬುದ್ಧಿಯ ಸಾಂಗತ್ಯವನ್ನು ಒಬ್ಬ ತಂದೆಯೊಂದಿಗೆ ಜೋಡಿಸಿ ಅನೇಕ ಸಾಂಗತ್ಯ ದೋಷಗಳಿಂದ ಮುಕ್ತಿಯನ್ನು ಪಡೆದಿದ್ದೇನೆ.

11. ನಾನು ಬ್ರಹ್ಮಾ ತಂದೆಯನ್ನು ಪ್ರತ್ಯಕ್ಷ ಮಾಡುವ ಬ್ರಹ್ಮಕುಮಾರಿಯಾಗಿದ್ದೇನೆ.

12. ಸದಾ ನನ್ನ ಮೂರನೇ ನೇತ್ರ ತೆರೆದೇ ಇದೆ.

13. ನನಗೆ ಒಬ್ಬ ಶಿವ ತಂದೆಯ ಹೊರತು ಬೇರೆ ಯಾರೂ ಇಲ್ಲ.